**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1429/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** ಪಿ ಡಬ್ಲ್ಯೂ–01

**ದಿನಾಂಕಃ 28.03.2025**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ವೈ ವಕೀಲರಿಂದಃ**

ಈ ಪಿರ್ಯಾದಿ ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ಆರೋಪಿ ನಮ್ಮ ಬ್ಯಾಂಕಿಗೆ ಪ್ರತಿದಿನ ಪಿಗ್ಮಿ ಕಟ್ಟುತ್ತಿದ್ದರು ಎಂದರೆ ಸಾಕ್ಷಿಯು 30 ದಿನ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಪಿರ್ಯಾದಿಯಲ್ಲಿ ಹೇಳಿಲ್ಲ. ಆರೋಪಿಗೆ ಸಾಲವನ್ನು ನೀಡುವ ಪೂರ್ವದಲ್ಲಿ ಅವರ ಹೆಸರಿಗೆ 1,000/– ರೂ ಷೇರು ಮಾಡಿಸಿದ್ದೇವು. ಈ ವಿಚಾರವನ್ನು ಪಿರ್ಯಾದಿಯಲ್ಲಿ ನಮೂದಿಸಿದ್ದೇನೆ. ಆರೋಪಿ ಹೂ ಮಾರುವ ಕೆಲಸ ಮಾಡುತ್ತಾರೆ. ಆರೋಪಿಯ ಖಾತೆ ನಂಬರ್ ನನಗೆ ನೆನಪಿಲ್ಲ. ಅದೇ ರೀತಿ ಆರೋಪಿಯ ಸಾಲದ ಖಾತೆಯ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ 2 ಆರೋಪಿಯ ಖಾತೆಗಳ ಎಷ್ಟು ಹಣ ಇತ್ತು ಎಂದು ಪಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆರೋಪಿ ಎಸ್ ಬಿ ಐ ಖಾತೆಯಲ್ಲಿ 200/ ರೂ ಇರಬಹುದು. ಆರೋಪಿಗೆ ಸಾಲ ನೀಡುವ ಸಮಯದಲ್ಲಿ ಆರೋಪಿಯಿಂದ ಮುಚ್ಚಳಿಕೆ ಪತ್ರ ಪೆಡದಿದ್ದೆವು. ಸದರಿ ಮುಚ್ಚಳಿಕೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆರೋಪಿ ಪಡೆದ ಸಾಲವನ್ನು ನಮಗೆ ತಿರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ಎಸ್ ಬಿ ಖಾತೆ ಮತ್ತು ಷೇರು ಹಣವನ್ನು ಜಮಾ ಮಾಡಿಕೊಂಡು ಸಾಲವನ್ನು ತಿರುವಳಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಲ ನೀಡುವ ಸಂದರ್ಭದಲ್ಲಿ ಆರೋಪಿಯಿಂದ ನಾವು ಉದ್ದೇಶಪೂರ್ವಕವಾಗಿ ಚೆಕ ಪಡೆದಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಖಾತೆಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆರೋಪಿಯ ಖಾತೆಯಿಂದ ಸಾಲವನ್ನು ನಾವು ತಿರುವಳಿ ಮಾಡಿಕೊಂಡಿದ್ದರಿಂದ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಗೆ ನೀಡಿದ ನೋಟಿಸ್ ಜಾರಿಯಾಗಿದೆ. ಆರೋಪಿ ಸಾಲದ ಹಣವನ್ನು ತಿರುವಳಿ ಮಾಡಿದ್ದರೂ ಆರೋಪಿ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ